# ತಾಯ್ತನ ಪಾರ್ಟ್‌ಟೈಮ್ ಜಾಬ್ ಅಲ್ಲ!

■ ಪದ್ಮನಾಭ ಭಟ್

ಶ್ರುತಿ ಹರಿಹರನ್ ತಿರುಗಿ ಬಂದಿದ್ದಾರೆ!

ಇದು ಒಂದು ಸುದ್ದಿಯಷ್ಟೇ ಅಲ್ಲ, ಸಂದೇಶವೂ ಹೌದು. 2018ರಲ್ಲಿ 'ಮಿ ಟೂ' ವಿವಾದದ ನಂತರ ಶ್ರುತಿ ಹರಿಹರನ್ ವೃತ್ತಿಬದುಕು ಮುಕ್ತಾಯಗೊಂಡಿತು ಎಂದು ಷರಾ ಬರೆದವರೇ ಹೆಚ್ಚು. 'ಸುಮ್ಮನಿದ್ದಿದ್ದರೆ ಆಗುತ್ತಿತ್ತು, ವೃತ್ತಿಭವಿಷ್ಯವನ್ನು ಕೈಯಾರೆ ಹಾಳುಮಾಡಿಕೊಂಡರು' ಎಂದು ಅಡಿಟಿಪ್ಪಣಿ ಬರೆದವರೂ ಕಮ್ಮಿಯೇನಿಲ್ಲ. ಕುಹಕವಾಡುವವರಿಗೆ ಬಲಕೊಡುವಂತೆ ನಂತರ ಅವರು ಸಿನಿಮಾಗಳಲ್ಲಿ ನಟಿಸಲಾಗಿರಲಿಲ್ಲ. ನಂತರ ತಾಯಿಯಾದ ಅವರು ಮಗಳ ಆರೈಕೆಯಲ್ಲಿ ಮುಳುಗಿಹೋದರು. ಇನ್ನು ಮತ್ತೆ ಶ್ರುತಿ ಅವರನ್ನು ತೆರೆಯ ಮೇಲೆ ಕಾಣಲಾಗದು ಎಂದು ಚಿತ್ರರಂಗವೇ ನಿರ್ಧರಿಸಿದಂತಿತ್ತು. ಇದಕ್ಕೆ ಪೂರಕವಾಗಿ 'ಮಿ ಟೂ' ಪ್ರಕರಣದಲ್ಲಿ ಮಾತಾಡಿದ ಇನ್ನೊಬ್ಬ ನಟಿ ಸಂಗೀತಾ ಭಟ್ ಅವರೂ ಚಿತ್ರರಂಗದಿಂದ ದೂರ ಸರಿದುಬಿಟ್ಟಿದ್ದರು. ಶೋಷಣೆಯ ವಿರುದ್ಧ ಧ್ವನಿಯೆತ್ತಿದ ಹೆಣ್ಣುಮಕ್ಕಳಿಗೆ ಚಿತ್ರರಂಗದಲ್ಲಿ ಯಾವ ಪರಿಸ್ಥಿತಿ ಬರುತ್ತದೆ ಎಂಬುದಕ್ಕೆ ಉದಾಹರಣೆಯಾಗಿ ಇವರ ಹೆಸರು ಉಲ್ಲೇಖವಾಗುತ್ತಿದ್ದವು.

ಆದರೆ ಅವರೆಲ್ಲರ ಬಾಯಿ ಮುಚ್ಚಿಸುವ ಹಾಗೆ ಶ್ರುತಿ ತಿರುಗಿ ಬಂದಿದ್ದಾರೆ. ಹಾಗಾಗಿಯೇ ಇದು ಸುದ್ದಿಯಷ್ಟೇ ಅಲ್ಲ, ಸಂದೇಶವೂ ಹೌದು.

**ಪ್ರತಿಭಾವಂತ ನಟಿ ಶ್ರುತಿ ಹರಿಹರನ್ 'ಹೆಡ್‌ಬುಶ್' ಸಿನಿಮಾದಲ್ಲಿ ಮುಖ್ಯ ಪಾತ್ರವೊಂದರಲ್ಲಿ ನಟಿಸುತ್ತಿದ್ದಾರೆ. ಇದು ಮುಖ್ಯವಾಹಿನಿಗೆ ಅವರ ಮರುಪ್ರವೇಶವೂ ಹೌದು.**

ಡಾಲಿ ಧನಂಜಯ್ ನಟಿಸಿ, ನಿರ್ಮಿಸುತ್ತಿರುವ, ಅಗ್ನಿ ಶ್ರೀಧರ್ ಬರವಣಿಗೆ ಇರುವ, ಶೂನ್ಯ ಅವರು ನಿರ್ದೇಶಿಸುತ್ತಿರುವ 'ಹೆಡ್‌ಬುಶ್' ಎಂಬ ಸಿನಿಮಾದಲ್ಲಿ ಶ್ರುತಿ ಹರಿಹರನ್ ಮುಖ್ಯವಾದ ಪಾತ್ರವೊಂದರಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

"ಒಂದಿಷ್ಟು ಗ್ಯಾಪ್‌ನ ನಂತರ ನಾನು 'ಸಾಲುಗಾರ' ಅಂತೊಂದು ಸಿನಿಮಾ ಮಾಡಿದ್ದೆ. ಆ ಸಿನಿಮಾ ಪೂರ್ತಿಗೊಂಡಿದೆ. ಇತ್ತೀಚೆಗೆ ಧನಂಜಯ್, ಹೆಡ್‌ಬುಶ್ ಸಿನಿಮಾದ ಪಾತ್ರದ ಬಗ್ಗೆ ಹೇಳಿದರು. ಅಗ್ನಿ ಶ್ರೀಧರ್ ಬರೆಯುತ್ತಿದ್ದಾರೆ ಎಂದೂ ಹೇಳಿದರು. ನಾನು 'ಎದೆಗಾರಿಕೆ' ಮತ್ತು 'ಆ ದಿನಗಳು' ಸಿನಿಮಾ ನೋಡಿ ಇಷ್ಟಪಟ್ಟಿದ್ದೆ. ಈ ಸಿನಿಮಾದ ಕಥೆಯೂ ಇಷ್ಟವಾಯ್ತು. ಇದರಲ್ಲಿ ಕೆಲವೇ ಕೆಲವು ಮಹಿಳಾ ಪಾತ್ರಗಳಿವೆ. ಇದು ಹೀರೊ ಹೀರೊಯಿನ್ ಮೇಲೆ ನಿಂತಿರುವ ಸಿನಿಮಾ ಅಲ್ಲ. ಪ್ರತಿಯೊಂದು ಪಾತ್ರಕ್ಕೂ ಅದರದೇ ಆದ ಮಹತ್ವವಿದೆ. ಹಾಗಾಗಿ ಖುಷಿಯಿಂದಲೇ ಒಪ್ಪಿಕೊಂಡೆ' ಎನ್ನುತ್ತಾರೆ ಶ್ರುತಿ.

ಇದು ಶ್ರುತಿಗೆ ಸವಾಲಿನ ಪಾತ್ರ ಅನಿಸಿದೆ. ಆ ಸವಾಲೇ ಅವರಿಗೆ ಖುಷಿಯನ್ನೂ ಕೊಡುತ್ತಿದೆ. 'ಕಾಲ್ಪನಿಕವಾಗಿ ಬರೆದ ಪಾತ್ರಕ್ಕೆ ನ್ಯಾಯ ಒದಗಿಸುವುದು ಸುಲಭ. ಆದರೆ ನಿಜವಾಗಿ ಬದುಕಿದ್ದ ಪಾತ್ರಕ್ಕೆ ತೆರೆಯ ಮೇಲೆ ಜೀವತುಂಬುವುದು ಸವಾಲಿನ ಕೆಲಸ. ಇದು 1970ರಲ್ಲಿ ನಡೆಯುವ ಪೀರಿಯಾಡಿಕ್ ಸಿನಿಮಾ. ಆ ಕಾಲದ ವಾತಾವರಣ, ಆಗ ಜನರ ಭಾವನೆಗಳು, ಅವರ ಆಲೋಚನೆಗಳು, ವಸ್ತ್ರ, ಮಾತಾಡುವ ರೀತಿ, ಸಾಮಾಜಿಕ ಪರಿಸ್ಥಿತಿ ಎಲ್ಲವನ್ನೂ ಯೋಚಿಸಿ ಆವಾಹಿಸಿಕೊಳ್ಳಬೇಕು. ಈ ಚಿತ್ರದಲ್ಲಿ ನಾನು ನಿರ್ವಹಿಸುತ್ತಿರುವುದು ಒಂದು ಐಡಿಯಲಿಸ್ಟಿಕ್ ಹೆಣ್ಣಿನ ಪಾತ್ರ. ತುಂಬ ಪ್ರಾಮಾಣಿಕವಾದ ಈ ಹೆಣ್ಣಿನ ಪಾತ್ರದಲ್ಲಿ ಗ್ರೇ ಏರಿಯಾ ಎನ್ನುವುದೇ ಇಲ್ಲ. ಕಪ್ಪು ಅಥವಾ ಬಿಳುಪು ಎನ್ನುವಂತೆ, ಒಳ್ಳೆಯದು ಅಥವಾ ಕೆಟ್ಟದ್ದು ಎಂಬುದರ ಬಗ್ಗೆ ಸ್ಪಷ್ಟ ವ್ಯತ್ಯಾಸವಿದೆ ಅವಳಿಗೆ. ನೇರ ನಡೆಯವಳು, ಯಾರಿಗೂ ಹೆದರದವಳು' ಎಂದು ತಾವು ನಿರ್ವಹಿಸುತ್ತಿರುವ ಪಾತ್ರದ ಕುರಿತು ವಿವರಿಸುತ್ತಾರೆ ಅವರು.

